ಆರ್‌ಬಿಐ/2008-09/ 296
ಡಿಬಿಒಡಿ.ಸಂ.ಎಲ್‌ಇಜಿ.ಬಿಸಿ. 86/09.07.005/2008-09

ನವೆಂಬರ್ 25, 2008

ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು/ ಎಲ್ಲ ಅಖಿಲಭಾರತ ಹಣಕಾಸು ಸಂಸ್ಥೆಗಳು
(ಆರ್‌ಆರ್‌ಬಿಗಳನ್ನು ಹೊರತುಪಡಿಸಿ)

ಮಾನ್ಯರೇ

**ಸಾಲ ನೀಡಿಕೆದಾರರಿಗೆ ನ್ಯಾಯಸಮ್ಮತ ಆಚರಣೆಗಳ ಸಂಹಿತೆ-**
**<u>ಸಂಸ್ಕರಣಾ ಶುಲ್ಕ/ ವೆಚ್ಚಗಳ ಸಂಬಂಧಿಸಿದಂತೆ ಎಲ್ಲ ಮಾಹಿತಿಯನ್ನು ಬಹಿರಂಗಪಡಿಸುವಿಕೆ</u>**

ನಮ್ಮ ದಿನಾಂಕ ಮಾರ್ಚ್ 6, 2007ರ ಸುತ್ತೋಲೆ ಡಿಬಿಒಡಿ.ಸಂ.ಎಲ್‌ಇಜಿ.ಬಿಸಿ. 65/09.07.005/2006-07ನ್ನು ದಯವಿಟ್ಟು ಗಮನಿಸಿ. ಇದರಲ್ಲಿ ಸಾಲ ಪಡೆಯುವವನು ಕೋರಿದ ಸಾಲದ ಮೊತ್ತವನ್ನು ಪರಿಗಣಿಸದೆ ಎಲ್ಲ ವರ್ಗದ ಸಾಲಗಳಿಗೆ, ಸಮಗ್ರ ಮಾಹಿತಿ ಹೊಂದಿರುವ ಸಾಲದ ಅರ್ಜಿಗಳು ಇರಬೇಕೆಂದು ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳಿಗೆ ಸಲಹೆ ನೀಡಲಾಗಿದೆ. ಸಂಸ್ಕರಣಾ ಶುಲ್ಕ/ ವೆಚ್ಚಗಳು ಯಾವುದಾದರೂ ಪಾವತಿಸಬೇಕಾಗಿದ್ದರೆ ಅವುಗಳಬಗ್ಗೆ, ಅರ್ಜಿ ಅಸ್ವೀಕಾರವಾದರೆ ಹಿಂತಿರುಗಿಸುವ ಶುಲ್ಕದ ಬಗ್ಗೆ, ಪೂರ್ವ ಪಾವತಿ ಆಯ್ಕೆ ಮತ್ತು ಸಾಲ ಪಡೆಯುವವನ ಹಿತಾಸಕ್ತಿಗೆ ಬಾಧಕವಾಗುವ ಇನ್ನಿತರ ಯಾವುದೇ ವಿಷಯಗಳನ್ನು ಅರ್ಜಿಯು ಒಳಗೊಂಡಿರಬೇಕು. ಇದರಿಂದಾಗಿ, ಇತರ ಬ್ಯಾಂಕುಗಳಿಗೆ ಹೋಲಿಸಿ ಸಾಲಪಡೆಯುವವನು ಅರ್ಥಪೂರ್ಣ ತುಲನಾತ್ಮಕವಾದ ನಿರ್ಧಾರ ತೆಗೆದುಕೊಳ್ಳಬಹುದಾಗಿದೆ.

2. ಕೆಲವು ಬ್ಯಾಂಕುಗಳು ಸಂಸ್ಕರಣಾ ಶುಲ್ಕದ ಜೊತೆಗೆ ಸಾಲಪಡೆಯುವವನಿಗೆ ಆರಂಭದಲ್ಲಿ ತಿಳಿಯಪಡಿಸದ ಕೆಲವು ನಿಗದಿತ ಶುಲ್ಕಗಳನ್ನು ವಿಧಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಸಾಲಪಡೆಯುವವನಿಗೆ ತಿಳಿಸದೆ, ತರುವಾಯ ಈ ರೀತಿ ಶುಲ್ಕಗಳನ್ನು ವಿಧಿಸುವುದು ನ್ಯಾಯಸಮ್ಮತವಲ್ಲದ ಆಚರಣೆಯಾಗಿರುತ್ತದೆ ಎಂದು ಉಲ್ಲೇಖಿಸಬೇಕಾಗುತ್ತದೆ.

3. ಆದುದರಿಂದ, ಸಂಸ್ಕರಣೆಗೆ ಸಂಬಂಧಿಸಿದ ಎಲ್ಲ ಶುಲ್ಕ/ ವೆಚ್ಚಗಳನ್ನು ಸಾಲದ ಅರ್ಜಿಯಲ್ಲಿ ತಪ್ಪದೇ ನಮೂದಿಸಿರುವುದನ್ನು ಬ್ಯಾಂಕುಗಳು / ಹಣಕಾಸು ಸಂಸ್ಥೆಗಳು ಖಚಿತಪಡಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ. ಇದಲ್ಲದೆ, ಬ್ಯಾಂಕುಗಳು ಗ್ರಾಹಕನಿಗೆ ವಿವಿಧ ಹಣಕಾಸಿನ ದರಗಳನ್ನು ಇತರೆ ಹಣಕಾಸು ಮೂಲಗಳು ವಿಧಿಸುವ ದರಗಳೊಡನೆ ತುಲನೆಮಾಡಲು ಸಾಧ್ಯವಾಗುವಂತೆ 'ಸಮಗ್ರ ವೆಚ್ಚಗಳು ಸೇರಿದಂತೆ' ಮಾಹಿತಿಯನ್ನು ನೀಡಬೇಕೆಂದು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

(ಪ್ರಶಾಂತ್ ಸರನ್)
ಮುಖ್ಯ ಮಹಾ ವ್ಯವಸ್ಥಾಪಕರು- ಪ್ರಭಾರಿ